ಐದು ದಿನ ತಾವು ‘ಅಶುದ್ಧ’ವೆಂದು, ಮುಟ್ಟಾಗುವವರಾದ್ದರಿಂದ ಕೆಲವು ವಿಷಯಗಳಿಗೆ ಸದಾ ಅನರ್ಹರೆಂದು ಭಾವಿಸುವಂತಾಯಿತು. ಮನೆಯಲ್ಲಿ ಪೂಜೆ, ವ್ರತ, ಆಚರಣೆಗಳು ನಡೆಯುವ ಹೊತ್ತಿಗೆ, ದೇವಸ್ಥಾನಕ್ಕೆ ಭೇಟಿನೀಡುವ ಹೊತ್ತಿಗೆ ಮುಟ್ಟು ಬರದಂತೆ ತಡೆಯಲಾಯಿತು. ಅದಕ್ಕೇ ಈಗಲೂ ಮುಟ್ಟು ಜೀವನ್ಮರಣದ ಪ್ರಶ್ನೆಯೋ ಎಂಬಂತೆ ಚರ್ಚೆ ನಡೆಯುತ್ತದೆ. ಶಿಕ್ಷಿತ, ಉದ್ಯೋಗಸ್ಥ, ಅಧಿಕಾರಸ್ಥ ಮಹಿಳೆಯರೂ ಸಹಾ ಮುಟ್ಟಿನ ಕುರಿತು ವಿಚಿತ್ರ ಭಯ, ಕೀಳರಿಮೆ ಹೊಂದಿ ಮುಂದೆ–ಹಿಂದೆ ಹಾಕಲು ಯತ್ನಿಸುತ್ತಾರೆ.

ಮುಟ್ಟು ಒಂದು ನೈಸರ್ಗಿಕ ಪವಿತ್ರ ಕ್ರಿಯೆ. ಮುಟ್ಟಾದ ಹೆಣ್ಣು ಹೊರಗೆ ಕೂರಬೇಕೆಂದು, ಅಪವಿತ್ರಳೆಂದು ಯಾವ ಶಾಸ್ತ್ರಗ್ರಂಥವೂ ಹೇಳಿಲ್ಲ. ಆ ದಿನಗಳಲ್ಲಿ ದೇವಾಲಯ ಪ್ರವೇಶ ಮಾಡಬಾರದೆಂದು ಯಾವ ದೈವವೂ ಕಟ್ಟಳೆ ವಿಧಿಸಿರಲು ಸಾಧ್ಯವಿಲ್ಲ. ತನ್ನ ಸೃಷ್ಟಿಯನ್ನು ದೈವ ತಾನೇ ನಿಷೇಧಿಸಲು, ಕೀಳೆನ್ನಲು ಸಾಧ್ಯವೇ? ಎಂದರೆ ‘ಮೂರು ದಿನ ಮೈಲಿಗೆ’ಯ ಹಿಂದಿನ ಸತ್ಯ ಬೇರೆಯೇ ಇದೆ. ಮುಟ್ಟಾದಾಗ ಅಶುದ್ಧ ಎನ್ನುವುದೇ ಹೆಣ್ಣಿನ ಕುರಿತ ಎಲ್ಲ ಕೀಳು ಭಾವನೆ, ತಾರತಮ್ಯಕ್ಕೆ ಮೂಲವಾಗಿದೆ. ಅದು ಹೆಣ್ಣುಮಕ್ಕಳನ್ನು ರಾಜಕೀಯ, ಸಾಮಾಜಿಕ, ಧಾರ್ಮಿಕವಾಗಿ ಹೊರಗಿಡಲು, ಅಧಿಕಾರ ಸ್ಥಾನಗಳಿಂದ ದೂರವಿಡಲು ಸಮಾಜಗಳು ಸೃಷ್ಟಿಸಿರುವ ಹುನ್ನಾರವಾಗಿದೆ.

ಪ್ರಾಕೃತಿಕವಾಗಿ ನೋಡಿದರೆ ಮುಟ್ಟಿನ ರಕ್ತವು ಗರ್ಭಧಾರಣೆ, ಸಂತಾನೋತ್ಪತ್ತಿ ಹಾಗೂ ಕುಲದ ಉಳಿವಿನ ದ್ಯೋತಕ. ಎಂದೇ ಮುಟ್ಟಾದ ಹೆಣ್ಣು ಪವಿತ್ರ. ಆದರೆ ಎರಡು ತೊಡೆಗಳ ನಡುವೆ ರಕ್ತ ಹರಿಸುವ ಹೆಣ್ಣು ಮತ್ತು ತನ್ನಂತಹುದೇ ಇನ್ನೊಂದು ಜೀವ ಸೃಷ್ಟಿಸುವ ಅವಳ ತಾಕತ್ತು ಆದಿಪುರುಷರನ್ನು ಬಹುವಾಗಿ ಭಯಗೊಳಿಸಿರಬೇಕು. ಎಂದೇ ಎಲ್ಲ ಕುಲ, ಸಮುದಾಯಗಳಲ್ಲಿಯೂ ಅವಳ ಆ ಶಕ್ತಿಯನ್ನು ಹೀಗಳೆಯುವ, ಕೀಳುಗೊಳಿಸುವ, ದುಷ್ಟಗೊಳಿಸುವ ಹುನ್ನಾರಗಳನ್ನು ನಂಬಿಕೆಗಳಾಗಿಸುತ್ತ ಬರಲಾಯಿತು. ಮುಟ್ಟು ಹೆಣ್ಣಿನ ದುಷ್ಟಶಕ್ತಿಯ ಮೂಲವೆಂದೂ ಪರಿಗಣನೆಗೊಳಗಾಯಿತು. ವಾಮಾಚಾರ, ಮಾಟಮಂತ್ರ ಮಾಡುವವರು ಮುಟ್ಟಿನ ಬಟ್ಟೆ ಅರಸಿ ಹೊರಟರು. ಮುಟ್ಟಾದವರೊಡನೆ ಲೈಂಗಿಕ ಸಂಪರ್ಕ ಹೊಂದುವುದನ್ನು ಜನಸಾಮಾನ್ಯರಿಗೆ ನಿಷೇಧಿಸಿದರೂ, ರಹಸ್ಯ ಸಾಧನೆ ಮಾಡುವ ವ್ಯಕ್ತಿಗಳು ಶಕ್ತಿಯ ಆರಾಧನೆ ಎಂದು ಯೋನಿಪೂಜೆ ಮಾಡಿದರು. ಒಂದೆಡೆ ಹೆಣ್ಣನ್ನು, ಮುಟ್ಟಿನ ಕಾಲವನ್ನು ಅಸಾಮಾನ್ಯವೆಂದು ಪರಿಗಣಿಸಿ ಅನೂಹ್ಯ ಪ್ರತಿಫಲಕ್ಕಾಗಿ ಬಳಸಿದರೆ, ಮತ್ತೊಂದೆಡೆ ಅಪವಿತ್ರತೆಯ ಸಂಕೇತವೆಂದು ದೂರವಿಡಲಾಯಿತು. ಮುಟ್ಟನ್ನು ಅಶುದ್ಧವೆಂದು ಸಾರುವ ಮೂಲಕ ಹೆಣ್ಣಿನ ಲೈಂಗಿಕತೆ ಮತ್ತು ಬೌದ್ಧಿಕತೆಯ ಮೇಲೆ ನಿಯಂತ್ರಣ ಸಾಧಿಸಲಾಯ್ತು.

ಆದರೆ ಇದನ್ನೆಲ್ಲ ವಿಚಾರ ಮಾಡದ ಈ ಕಾಲದ ಶಿಕ್ಷಿತ, ಆಧುನಿಕ ಹೆಣ್ಣುಮಕ್ಕಳು ಕೂಡಾ ಮುಟ್ಟನ್ನು ಮುಂದೆ ಹಾಕಲು, ಹಿಂದೆ ದೂಡಲು ಕಸರತ್ತು ನಡೆಸುತ್ತಾರೆ. ಮುಂದೆಂದೋ ನಡೆಯಲಿರುವ ಕಾರ್ಯಕ್ರಮದ ಸಲುವಾಗಿ ಮುಟ್ಟನ್ನು ತಿಂಗಳುಗಟ್ಟಲೆ ಮೊದಲೇ ಮುಂದೆ–ಹಿಂದೆ ಮಾಡುವ ಯೋಜನೆ ರೂಪಿಸುತ್ತಾರೆ. ದೇವರಲ್ಲಿಡುವ ಭಕ್ತಿಗಿಂತ, ಆಚರಣೆಯ ಶ್ರದ್ಧೆಗಿಂತ, ಕ್ರಿಯೆ ಕುರಿತ ನಂಬಿಕೆಗಿಂತ ಆಡಂಬರವೇ ಮುಖ್ಯವಾಗಿರುವ ‘ಕಲಿ’ಯುಗದಲ್ಲಿ ಬೇಡವಾದ ಕಾರಣಕ್ಕೆ ಮುಟ್ಟು ಪ್ರಾಮುಖ್ಯತೆ ಗಳಿಸಿಕೊಳ್ಳುತ್ತಿರುವುದು ವಿಷಾದಕರ.

***

ಅಂತಹ ಒಂದು ಕಾಲವಿತ್ತು. ಹುಡುಗಿ ‘ದೊಡ್ಡವ’ಳಾದರೆ ಅವಳಷ್ಟೇ ಅಲ್ಲ, ಅವಳ ತಾಯ್ತಂದೆಯರೂ ಅಳುತ್ತ

ಪ್ರಾಕೃತಿಕವಾಗಿ ನೋಡಿದರೆ ಮುಟ್ಟಿನ ರಕ್ತವು ಗರ್ಭಧಾರಣೆ, ಸಂತಾನೋತ್ಪತ್ತಿ ಹಾಗೂ ಕುಲದ ಉಳಿವಿನ ದ್ಯೋತಕ. ಎಂದೇ ಮುಟ್ಟಾದ ಹೆಣ್ಣು ಪವಿತ್ರ. ಆದರೆ ಎರಡು ತೊಡೆಗಳ ನಡುವೆ ರಕ್ತ ಹರಿಸುವ ಹೆಣ್ಣು ಮತ್ತು ತನ್ನಂತಹುದೇ ಇನ್ನೊಂದು ಜೀವ ಸೃಷ್ಟಿಸುವ ಅವಳ ತಾಕತ್ತು ಆದಿಪುರುಷರನ್ನು ಬಹುವಾಗಿ ಭಯಗೊಳಿಸಿರಬೇಕು. ಎಂದೇ ಎಲ್ಲ ಕುಲ, ಸಮುದಾಯಗಳಲ್ಲಿಯೂ ಅವಳ ಆ ಶಕ್ತಿಯನ್ನು ಹೀಗಳೆಯುವ, ಕೀಳುಗೊಳಿಸುವ, ದುಷ್ಟಗೊಳಿಸುವ ಹುನ್ನಾರಗಳನ್ನು ನಂಬಿಕೆಗಳಾಗಿಸುತ್ತ ಬರಲಾಯಿತು.

